ನೌಕರಿಯೂ ದೊರೆತು ಆತ ಹೊರಟು ನಿಂತ. ಸುಜಾತಾಳಿಗೆ ನೌಕರಿಯ ಅದೃಷ್ಟ ಬೇಗ ಕೂಡಿ ಬರಲಿಲ್ಲ. ಅವಳನ್ನು ಸಮಾಧಾನಿಸಿ ಶಶಿಕಾಂತ ಪ್ರಯಾಣ ಬೆಳೆಸಿದ. ಮುಂದಿನ ಭವಿಷ್ಯದ ಕನಸು ಕಾಣುತ್ತ ಸುಜಾತಾ ಹೊಸ ಹೊಸ ಕೆಲಸಕ್ಕೆ ಅರ್ಜಿ ಹಾಕುತ್ತ ಹೋದಳು.

ಸುಮಾರು ಒಂದು ವರ್ಷ ಕಳೆದರೂ ಸುಜಾತಾಳಿಗೆ ಯೋಗ್ಯ ನೌಕರಿ ದೊರೆಯಲಿಲ್ಲ. ಈಗೀಗ ಶಶಿಕಾಂತನ ಇ–ಮೇಲ್ ಬರುವುದು ಕಡಿಮೆಯಾಗತೊಡಗಿತು. ಊರಿಗೆ ಬರುವುದು ನಿಂತು ಹೋಯಿತು. ಫೋನಿಸಿದರೆ ಕೆಲಸದ ಒತ್ತಡ ಎನ್ನುತ್ತಿದ್ದ. ಮತ್ತೂ ಒತ್ತಾಯಿಸಿ ಕೇಳಿದರೆ ಪ್ರಮೋಶನ್‌ಗೆ ತಯಾರಿ ಮಾಡುತ್ತಿದ್ದೇನೆ– ಅಂದ. ಆತನ ಧ್ವನಿಯಲ್ಲಿ ಹಿಂದಿನ ಕಳಕಳಿ ಇರಲಿಲ್ಲ. ಮಾರ್ದವತೆ ಎಂದೋ ಮಾಯವಾಗಿತ್ತು. ಸುಜಾತಾ ತೀರ ನೊಂದುಕೊಂಡಳು. ದುಃಖವನ್ನು ಮನೆಯವರಿಂದ ಬಹಳ ದಿನ ಮುಚ್ಚಿಡಲಾಗಲಿಲ್ಲ. ಅವನ ಹೆತ್ತವರಿಂದಲೂ ಇವರು ಅಪೇಕ್ಷಿಸಿದ ಉತ್ತರ ಬರಲಿಲ್ಲ. ಕೊನೆಗೆ ಅವಳ ಅಣ್ಣಂದಿರು ಶಶಿಕಾಂತನ ನೌಕರಿಯ ಊರಿಗೆ ಪಯಣ ಬೆಳೆಸಿದರು. ಉತ್ಸಾಹದಿಂದ ಹೋದವರು ಜೋಲು ಮೋರೆ ಹಾಕಿ ಹಿಂದಿರುಗಿದರು.

ಶಶಿಕಾಂತ ಅವರನ್ನು ಸ್ವಾಗತಿಸಲಿಲ್ಲ. ಮುಖಕೊಟ್ಟು ಮಾತನಾಡಲೂ ಇಲ್ಲ. ಆತನ ಆಫೀಸಿನಲ್ಲಿ ವಿಚಾರಿಸಿದರೆ ಶಶಿಕಾಂತ ಅದೇ ಊರಿನ ಶ್ರೀಮಂತ ದಂಪತಿಯ ಒಬ್ಬಳೇ ಮಗಳೊಡನೆ ಓಡಾಡುವ ವಿಷಯ ತಿಳಿದು ಬಂತು. ಶಶಿಕಾಂತ ಒಂದು ವರುಷದೊಳಗೆ ಇನ್ನೂ ಮೇಲಿನ ಹುದ್ದೆಗೆ ಬಡ್ತಿ ಹೊಂದಿದ್ದು ತಿಳಿದು ಬಂತು. ಹೇಳಿ ಕೇಳಿ ಅವಳ ಅಣ್ಣಂದಿರು ಕಾಲೇಜು ಮೆಟ್ಟಲೇರದವರು. ಅವನನ್ನು ಎದುರಿಸುವ ಧೈರ್ಯ ಇಬ್ಬರಿಗೂ ಬರಲಿಲ್ಲ. ಸದ್ಯದಲ್ಲೇ ಶಶಿಕಾಂತ ವಿದೇಶಕ್ಕೆ ಹೊರಡಲಿದ್ದಾನೆ ಎಂಬುದೂ ಅವನ ಸಹೋದ್ಯೋಗಿಗಳಿಂದ ತಿಳಿದು ಬಂತು. ಆಘಾತಕ್ಕೆ ಒಳಗಾಗಿ ಹೆತ್ತವರ ಜತೆ ಸುಜಾತಾ ಕೈ ಚೆಲ್ಲಿ ಕುಳಿತಳು. ಆದರೂ ಹಿಂದಿನ ಸಲುಗೆಯಿಂದ ಕೊನೆಯ ಪ್ರಯತ್ನವೆಂಬಂತೆ ಅವನಿಗೆ ಫೋನಿಸಿದಳು. ಆತನ ಮಾತಿನಲ್ಲಿ ದರ್ಪವೇ ಹೊರತು ಕಾರುಣ್ಯದ ಲವಲೇಶವೂ ಇರಲಿಲ್ಲ.

'ಶಶೀ... ಅಣ್ಣಂದಿರು ಹೇಳುತ್ತಿರುವುದೆಲ್ಲ ನಿಜವೇನು?' ತಡವರಿಸುತ್ತಲೇ ಕೇಳಿದಳು ಸುಜಾತಾ.

'ಹಾಗೆಂದೇ ಇಟ್ಟುಕೋ ಸುಜಾತಾ. ನನ್ನನ್ನು ದಯವಿಟ್ಟು ಕ್ಷಮಿಸು. ಈ ದೊಡ್ಡ ಊರಿಗೆ ಬಂದ ಮೇಲೆಯೇ ನಿಜವಾದ ಪ್ರಪಂಚವನ್ನು ನೋಡುತ್ತಿದ್ದೇನೆ. ಇಲ್ಲಿ ನನಗೆ ಬಹಳಷ್ಟು ಅವಕಾಶಗಳ ಬಾಗಿಲು ತೆರೆದಿದೆ. ಬಹುಶಃ ನನ್ನ ನಿನ್ನ ಋಣ ಇಷ್ಟಕ್ಕೆ ಮುಗಿಯಿತು ಅಂದುಕೊಳ್ತಾ ಇದ್ದೇನೆ. ಇಲ್ಲಿ ನನ್ನ ಸಹಪಾಠಿ ಲಕ್ಷ್ಮಿ ನನ್ನನ್ನು ತುಂಬಾ ಹಚ್ಚಿಕೊಂಡಿದ್ದಾಳೆ. ಈಗ ಅವಳ ಅಪ್ಪನೇ ನನ್ನನ್ನು ಹೆಚ್ಚಿನ ಓದಿಗಾಗಿ ಅಮೆರಿಕೆಗೆ ಕಳಿಸಿಕೊಡುತ್ತಿದ್ದಾರೆ. ಅವರೆಲ್ಲ ಒಳ್ಳೆಯ ಜನ. ನನ್ನನ್ನು ಮರೆತು ಬಿಡು...' ಮುಂದಿನ ಮಾತಿಗೆ ಅವಕಾಶವಿಲ್ಲದಂತೆ ಮೊಬೈಲ್ ಆಫ್ ಮಾಡಿದ.

ಸುಜಾತಾ ದಂಗಾಗಿ ಕುಳಿತಳು. ಅವಳು ಅಳಲಿಲ್ಲ. ಮನೆಯವರೆಲ್ಲರೂ ಶಶಿಕಾಂತನನ್ನು ಬೈಯುತ್ತಿದ್ದರೂ ಅವಳು ಒಂದು ಮಾತೂ ಅನ್ನಲಿಲ್ಲ. ಮೌನಕ್ಕೆ ಮೊರೆ ಹೋದಳು. ತಿಂದರೆ ಉಂಟು, ಇಲ್ಲದಿದ್ದರೆ ಇಲ್ಲ. ಮನೆಯ ಯಾವುದೋ ಮೂಲೆಯಲ್ಲಿ ಸೂರು ನೋಡುತ್ತ ಬಿದ್ದುಕೊಳ್ಳುವಳು. ಹೆತ್ತವರ ಹೊಟ್ಟೆ ಉರಿಯುತ್ತಿತ್ತು. ಅಣ್ಣಂದಿರು ಶಶಿಕಾಂತನ ಮೇಲಿನ ಅಸಹನೆಯನ್ನು ಇವಳ ಮೇಲೆ ತೆಗೆಯತೊಡಗಿದರು. ಅಮ್ಮ ಕಾಯಿಲೆ ಬಿದ್ದಳು. ಕೊನೆಗೊಂದು